| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 500/2023**

ಪಿಡ್ಲ್ಯೂಃ 8 ಸಿಡ್ಲ್ಯೂಃ 8

ಸಾಕ್ಷಿದಾರನ ಹೆಸರು : ಸುರೇಶ್ ಶೆಟ್ಟಿ
ತಂದೆಯ ಹೆಸರು : ವಿಠಲ್ ಶೆಟ್ಟಿ
ಪ್ರಾಯ : 49 ವರ್ಷ
ಉದ್ಯೋಗ : ಕೃಷಿ
ವಾಸ : ಕಲ್ಯಾ ಗ್ರಾಮ

ದಿನಾಂಕ 28.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಸುಮಾರು ಎರಡುವರೆ ವರ್ಷದ ಹಿಂದೆ ಪೊಲೀಸರು ಮಹಜರಿಗೆ ಠಾಣೆಗೆ ಕರೆದಿರುತ್ತಾರೆ. ನನ್ನ ಸಮಕ್ಷಮ 2 ನೇ ಆರೋಪಿಯನ್ನು ದಸ್ತಗಿರಿ ಮಾಡಿರುತ್ತಾರೆ. ಪೊಲೀಸರು ಮಹಜರು ಮುಖೇನ 2 ನೇ ಆರೋಪಿಯ ಮೊಬೈಲ್ ಫೋನ್ ನ್ನು ಸ್ವಾಧೀನಪಡಿಸಿಕೊಂಡಿದ್ದರು. ನನ್ನ ಜೊತೆ ಚಾಸಾ-7 ರವರು ಇದ್ದರು. ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಈಗ ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಯನ್ನು ಈಗಾಗಲೇ ನಿಪಿ-29 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-29(ಬಿ) ಎಂದು ಗುರುತಿಸಲಾಯಿತು. ಸದ್ರಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ ಭಾವಚಿತ್ರವನ್ನು ತೆಗೆದಿರುತ್ತಾರೆ. ಈಗ ನಾನು ನೋಡಿದ ನಿಪಿ-32 ಭಾವಚಿತ್ರ 2 ನೇ ಆರೋಪಿಯ ಮೊಬೈಲ್ ಫೋನ್ ದ್ದಾಗಿರುತ್ತದೆ.

ಅದೇ ದಿನ ಠಾಣೆಯಿಂದ 2ನೇ ಆರೋಪಿಯವರ ಮನೆಯಾದ ಕಲ್ಲಾಕ್ಕೆ ಹೋಗಿರುತ್ತೇವೆ. ನನ್ನ ಜೊತೆ ಆ ಸಮಯದಲ್ಲಿ ಚಾಸಾ-7 ರವರು ಇದ್ದರು. ಅವರ ಮನೆಯಲ್ಲಿ ಬಂಗಾರದ ಬಳೆಯನ್ನು ಮಹಜರು ಮುಖಾಂತರ ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಮಾಡಿರರುತ್ತೇನೆ. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಯನ್ನು ಈಗಾಗಲೆ ನಿಪಿ-30 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-30(ಬಿ) ಎಂದು ಗುರುತಿಸಲಾಯಿತು. ಸದ್ರಿ ಸ್ಥಳದಲ್ಲಿ ತೆಗೆದಂತಹ ನಿಪಿ-31 ಭಾವಚಿತ್ರವನ್ನು ನೋಡಿ ಗುರುತಿಸಿದ್ದೇನೆ. ಮುದ್ದೆ ಮಾಲು 4 ನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎಸ್ ಕೆ ವಕೀಲರಿಂದಃ

ನನ್ನ ಉದ್ಯೋಗ ಕೃಷಿ. ಈ ಪ್ರಕರಣದ ಚಾಸಾ-1 ಮತ್ತು 2 ನನ್ನ ಆತ್ಮೀಯರು. ಅವರು ಈ ಪ್ರಕರಣದಲ್ಲಿ ನನಗೆ ಸಾಕ್ಷಿ ಹೇಳಲು ಹೇಳಿರುತ್ತಾರೆ. ಅವರು ಹೇಳಿದ ಹಾಗೇ ಈ ದಿನ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳುತ್ತಿದ್ದೇನೆ. ಪೊಲೀಸರಿಗೆ ಚಾಸಾ-1 ರವರು ನನ್ನ ಮೊಬೈಲ್ ನಂಬರ್ ಕೊಟ್ಟಿರುತ್ತಾರೆ. ಈ ದಿನ ಚಾಸಾ-1 ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಪೊಲೀಸರು ನನಗೆ 2 ವರ್ಷಗಳ ಹಿಂದೆ ಮಹಜರಿಗೆ ಕರೆದಿರುತ್ತಾರೆ. ಪೊಲೀಸ್ ಠಾಣೆಯಲ್ಲಿ 2 ಸಹಿ ಹಾಕಿರುತ್ತೇನೆ. ಪೊಲೀಸ್ ಠಾಣೆಯಲ್ಲಿ ನಾನು ಮತ್ತು ಚಾಸಾ-7 ರವರು ಇದ್ದೇವು. ಪೊಲೀಸ್ ಠಾಣೆಯಲ್ಲಿ ಪೊಲೀಸರು ನನಗೆ ಯಾರನ್ನು ತೋರಿಸಿರುವುದಿಲ್ಲ ಸಹಿ ಹಾಕಲು ಹೇಳಿದ್ದರು ಸಹಿ ಹಾಕಿರುತ್ತೇನೆ. ಪೊಲೀಸ್ ಠಾಣೆಯಿಂದ ನಾನು ನನ್ನ ಮನೆಗೆ ಹೋಗಿರುತ್ತೇನೆ. ನಂತರ ಪೊಲೀಸರು ನನ್ನನ್ನು 2 ನೇ ಆರೋಪಿಯ ಮನೆಗೆ ಕರೆದಿರುತ್ತಾರೆ. 2 ಪೊಲೀಸರು ಇದ್ದರು. ಯಾವ ಕಾರಣಕ್ಕೆ ಕರೆದಿರುತ್ತಾರೆ ಎಂದು ಗೊತ್ತಿಲ್ಲ.

ಸದ್ರಿ ಮನೆಯಲ್ಲಿ ನಾನು 5 ರಿಂದ 10 ನಿಮಿಷ ಇದ್ದೆ. ಸದ್ರಿ ಮನೆ ಶೀಟಿದ್ದಾನಾಗಿರುತ್ತದೆ. ಮನೆಯಲ್ಲಿ ಎಷ್ಟು ಕೋಣೆ ಇದೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತನ್ನು ಸ್ವಾ ಧೀನಪಡಿಸಿಕೊಂಡಿರುವುದಿಲ್ಲ. ದಾಖಲೆಗೆ ಸಹಿ ಹಾಕಿಸಿಕೊಂಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷ್ಯ ಚಾಸಾ-1 ರವರು

ಹೇಳಿಕೊಟ್ಟಂತೆ ಹೇಳಿರುತ್ತೇನೆ. ನನ್ನ ಸಮಕ್ಷಮದಲ್ಲಿ ಸ್ವಾ ಧೀನಪಡಿಸಿಕೊಂಡ ಮೊಬೈಲ್ ಯಾವ ಕಂಪನಿಯದ್ದು, ಬಣ್ಣ, ಆಕಾರ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಮೊಬೈಲ್ ಸ್ವಾ ಧೀನಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು 2 ಸಹಿ ಹಾಕಿದ್ದನ್ನು ಹೊರತುಪಡಿಸಿ ಈ ಪ್ರಕರಣದಲ್ಲಿ ಬೇರೆ ಏನು ಗೊತ್ತಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ